## ಕಥೆ





ಮಲಯಾಳಂ: **ಶಿಹಾಬುದ್ದೀನ್ ಪೊಯ್ತುಂಕಡವು**
ಕನ್ನಡಕ್ಕೆ: **ಸುನೈಫ್**
ಕಲೆ: ವಿಶ್ವನಾಥ್ ಎ.ಎಸ್.

# ಒಂಟಿ ಸ್ಟೇಷನ್

### ಒಂದು

ಒಂದಾನೊಂದು ಊರಿನಲ್ಲಿ ಒಂದು ರೈಲ್ವೇ ಸ್ಟೇಷನ್ ಇತ್ತು. ಮರುಭೂಮಿಯ ಹಾಗೆ ನಿರ್ಜನವಾಗಿದ್ದ, ಏಕಾಂತತೆಯ ಬಿಸಿಗಾಳಿ ಸುಳಿಯುತ್ತಿದ್ದ ಜಾಗದಲ್ಲಿ, ಯಾವುದೋ ಅನ್ಯಗ್ರಹದಲ್ಲೆಂಬಂತೆ ಅದಲ್ಲಿ ನೆಲೆಗೊಂಡಿತ್ತು. ಮೋಡಗಳು ಮತ್ತು ಅಪರೂಪಕ್ಕೆ ಬರುವ ಹಕ್ಕಿಗಳು ಭಯದಿಂದಲೇ ಅದರ ಮೇಲಿಂದ ಹಾರಿ ಹೋಗುತ್ತಿದ್ದವು. ಸ್ಟೇಷನ್ನಿನ ಎದುರಿಗಿದ್ದ ಹಳಿಗಳು ಯಾವುದೋ ನಿಗೂಢ ಕೇಂದ್ರದಿಂದ ಹೊರಟು ಮತ್ಯಾವುದೋ ದುರ್ಗ್ರಾಹ್ಯ ದಿಕ್ಕಿಗೆ ಚಾಚಿಕೊಂಡಿದ್ದವು. ಸದಾಕಾಲ ಅವು ಬಿಸಿಯಾಗಿ ಬೆಂದಿರುತ್ತಿದ್ದವು. ಜಲ್ಲಿಕಲ್ಲುಗಳ ನಡುವೆ ಬಿದ್ದುಕೊಂಡು ವಿಷಸರ್ಪದಂತೆ ನಿದ್ರಿಸುತ್ತಿದ್ದವು. ಟೆಲಿಫೋನ್ ತಂತಿಗಳಿಗೆ ಗಾಳಿ ಸೋಕುವಾಗ ನಿರ್ಜನತೆಯೂ ಏಕಾಂತತೆಯೂ ಒಟ್ಟಿಗೆ ಸೇರಿ ಮರಣಕಹಳೆಯಂತಹ ನಾದವೊಂದು ಹೊರಡುತ್ತಿತ್ತು.

ಅಲ್ಲಿನ ಸ್ಟೇಷನ್ ಮಾಸ್ಟರ್ ಅಕಾಲ ವೃದ್ಧಾಪ್ಯ ಬಾಧಿಸಿದ ಯುವಕನಾಗಿದ್ದ. ಬ್ರಿಟಿಷರ ಕಾಲದ ವಾಸ್ತುಶೈಲಿಯ, ಉಕ್ಕಿನ ಕಂಬಗಳು ಮತ್ತು ಅತಿ ಪುರಾತನ ಮಾಡನ್ನು ಹೊಂದಿದ್ದ ಆ ಕಟ್ಟಡ ಸಾವಿನ ಮನೆಯನ್ನು ನೆನಪಿಸುತ್ತಿತ್ತು.

ಏಕಾಂತತೆಯ ಮಹಾಸಮುದ್ರದಲ್ಲಿ ಸಿಲುಕಿದ್ದ ಆ ಸ್ಟೇಷನ್ ಮಾಸ್ಟರ್ ತನ್ನ ಮೇಲಧಿಕಾರಿಗಳಿಗೆ ಕಾಗದ ಬರೆಯುತ್ತಿದ್ದ:

ಗೌರವಾನ್ವಿತ ಸರ್,

ಇದು ಎಷ್ಟನೆಯ ಅರ್ಜಿಯೆಂದು ನನಗೆ ನೆನಪಿಲ್ಲ. ಈ ಒಂಟಿ ಸ್ಟೇಷನ್ನಿನಲ್ಲಿ ಸೇವೆಗೆ ತೊಡಗಿ ವರ್ಷಗಳು ಅದೆಷ್ಟು ಉರುಳಿ ಹೋದವು ಎಂದು ಕೂಡ ನನಗೆ ನೆನಪಿಲ್ಲ. ಬರುಬರುತ್ತಾ ನನ್ನ ಭೂತಕಾಲವೆಲ್ಲ ನೆನಪಿನಿಂದ ಮರೆಯಾಗುತ್ತಿದೆ. ಶಿಶಿರದ ತಂಗಾಳಿಗೆ ದೂರದಲ್ಲಿ ಎಲೆಗಳು ಉದುರಿ ಹೋಗುವುದನ್ನು ಅದೆಷ್ಟು ಬಾರಿ ನೋಡಿದೆ. ನಿಜದಲ್ಲಿ ಈ ಸ್ಟೇಷನ್ನಿಗೆ ನಾನು ನಿಯುಕ್ತಿಗೊಂಡಿರುವುದು ಜೀವಾವಧಿ ಏಕಾಂತ ಶಿಕ್ಷೆಗೊಳಗಾಗಿ ತಾನೆ ಸರ್? ಆ ಸತ್ಯವನ್ನಾದರೂ ನನ್ನಿಂದ ಮುಚ್ಚಿಡದಿರಲು ನಿಮಗೆ ಸಾಧ್ಯವಿಲ್ಲವೇ? ಒಬ್ಬ ವ್ಯಕ್ತಿ ಬಹಳ ಕಾಲ ಒಬ್ಬಂಟಿಯಾದಾಗ, ಬರಿದೇ ಯೋಚನೆಗೂ ಕೂಡ ತನ್ನೊಂದಿಗೆ ಯಾರೂ ಇಲ್ಲದಾದಾಗ ಆತ ಸಾಮಾಜಿಕ ಬಹಿಷ್ಕಾರಕ್ಕೆ